# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಎಂ.ಪಂಪಾಪತಿ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕುಷ್ಟಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಇವರ ವಿರುದ್ಧದ ಇಲಾಖಾ ಆರೋಪಗಳಿಂದ ದೋಷಮುಕ್ತಗೊಳಿಸುವ ಬಗ್ಗೆ.

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 38 ಇಎನ್‌ಕ್ಯೂ 2004, ದಿನಾಂಕ. 6-4-2006.
2. ವಿಚಾರಣಾಧಿಕಾರಿಗಳ ವರದಿ ದಿನಾಂಕ. 01-09-2007
3. ಸರ್ಕಾರದ ಪತ್ರ ಸಂಖ್ಯೆ. ಗ್ರಾಅಪ 38 ಇಎನ್‌ಕ್ಯೂ 2004, ದಿನಾಂಕ. 18-01-2008
4. ವಿಚಾರಣಾಧಿಕಾರಿಗಳ ವಿಚಾರಣಾ ವರದಿ ದಿನಾಂಕ. 12-03-2008
5. ಸರ್ಕಾರದ ಪತ್ರ ಸಂಖ್ಯೆ. ಗ್ರಾಅಪ 38 ಇಎನ್‌ಕ್ಯೂ 2004, ದಿನಾಂಕ. 04/6-11-2008
6. ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಬಳ್ಳಾರಿ ಇವರ ಪತ್ರ ಸಂಖ್ಯೆ. ಅಅ/ಪಂರಾಇಂವೃ/ಬ/ಸಿ-1/Enquiry/ 2008-09/660, ದಿನಾಂಕ. 01-07-2009.
7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರ ಪತ್ರ ಸಂಖ್ಯೆ. ಜಿ ಪಂಕೊ / ಸಿಸಿಎ / 10/2004-05/3795, ದಿನಾಂಕ. 23/31-01-2012.

*****

**ಪ್ರಸ್ತಾವನೆ:**

ಕೊಪ್ಪಳ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮತ್ತು ಅದರ ನಾಲ್ಕು ಉಪ ವಿಭಾಗಗಳ ಉಗ್ರಾಣದ ದಾಸ್ತಾನಿನ ಕೊರತೆಯಿಂದಾಗಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಲು ಕಾರಣರಾದ ಕೆಳಕಂಡ ಅಧಿಕಾರಿ / ನೌಕರರ ವಿರುದ್ಧ ಜಂಟಿ ಇಲಾಖಾ ವಿಚಾರಣೆ ಜರುಗಿಸಲು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ. 6-4-2006ರ ಆದೇಶದಲ್ಲಿ ಶ್ರೀ ಟಿ.ಜೆ. ಮರಿಯಪ್ಪ, ನಿವೃತ್ತ ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

| ಕ್ರಮ ಸಂಖ್ಯೆ | ಆಪಾದಿತ ಅಧಿಕಾರಿ / ನೌಕರರ ಹೆಸರು ಶ್ರೀಯುತರು |
|---|---|
| 1. | ಕೆ.ಎನ್.ಚಂದ್ರಶೇಖರ್, ಅಂದಿನ ಲೆಕ್ಕಾಧೀಕ್ಷಕರು, ಜಿಪಂಇಂವಿ, ಕೊಪ್ಪಳ |
| 2. | ಬಿ.ವೈ. ಮಾದಿನೂರು, ಅಂದಿನ ಲೆಕ್ಕಾಧೀಕ್ಷಕರು, ಜಿಪಂಇಂವಿ, ಕೊಪ್ಪಳ. |

..2..

| | |
|---|---|
| 3. | ಎಂ.ಪಂಪಾಪತಿ, ಸ.ಕಾ.ಇಂ., ಜಿಪಂಇಂಉವಿ, ಕುಷ್ಟಗಿ |
| 4. | ದೇವೇಂದ್ರಪ್ಪ ದೇಸಾಯಿ, ಅಂದಿನ ಪ್ರಭಾರಿ ಲೆಕ್ಕಾಧೀಕ್ಷಕರು, |
| 5. | ಬಿ.ವಿ.ಬಳಲೂದ, ಅಂದಿನ ಉಗ್ರಾಣಪಾಲಕರು, ಜಿಪಂಇಂವಿ, ಕೊಪ್ಪಳ |
| 6. | ಈಶ್ವರ ಹತ್ತಿ, ಅಂದಿನ ಉಗ್ರಾಣಪಾಲಕರು, ಜಿಪಂಇಂವಿ, ಕೊಪ್ಪಳ |
| 7. | ಎಂ.ಹೆಚ್.ಜಾಗೀರದಾರ್, ಅಂದಿನ ಉಗ್ರಾಣ ಸಹಾಯಕರು |
| 8. | ವಿ.ಜಿ.ಕೊಳ್ಳಪ್ಪನವರ ಅಂದಿನ ದ್ವಿದಸ |
| 9. | ಬಿ.ವಿ.ಹಿತ್ತಲಮನಿ, ಅಂದಿನ ದ್ವಿದಸ |
| 10. | ತಿರುಮಲರಾವ್, ದ್ವಿ.ದ.ಸ., |
| 11. | ಮಾರ್ಟಿನ್, ಅಂದಿನ ಉಗ್ರಾಣಸಹಾಯಕರು, |
| 12. | ವಲಿಬಾ, ಅಂದಿನ ಉಗ್ರಾಣಸಹಾಯಕರು, |

ವಿಚಾರಣಾಧಿಕಾರಿಗಳು ಜಂಟಿ ವಿಚಾರಣೆ ಜರುಗಿಸಿ, ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ. 01-09-2007ರಂದು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಮೇಲ್ಕಂಡ ಅಧಿಕಾರಿ / ನೌಕರರ ವಿರುದ್ಧ ಮಾಡಿರುವ ಆರೋಪಗಳು ರುಜುವಾತಾಗಿಲ್ಲವೆಂದು ಅಭಿಪ್ರಾಯ ಪಟ್ಟಿರುತ್ತಾರೆ.

ಈ ಪ್ರಕರಣದಲ್ಲಿ ವಿಚಾರಣೆಯನ್ನು ಆಡಿಟ್ ವರದಿಯ ಆಧಾರದ ಮೇಲೆ ಪ್ರಾರಂಭಿಸಲಾಗಿತ್ತು. ಆಡಿಟ್ ದಾಖಲೆಗಳನ್ನು ಪರಿಶೀಲಿಸದೆ ಸಲ್ಲಿಸಿರುವ ವಿಚಾರಣಾ ವರದಿಯನ್ನು ಒಪ್ಪದೆ ಆಡಿಟ್ ವರದಿ / ದಾಖಲೆಗಳನ್ನು ಪರಿಶೀಲಿಸಿ, ಮರು ವಿಚಾರಣೆ ಜರುಗಿಸಿ ವರದಿ ಸಲ್ಲಿಸುವಂತೆ ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ. 18-01-2008ರ ಪತ್ರದಲ್ಲಿ ಪ್ರಕರಣವನ್ನು ವಿಚಾರಣಾಧಿಕಾರಿಗಳಿಗೆ ಹಿಂತಿರುಗಿಸಲಾಗಿತ್ತು.

ವಿಚಾರಣಾಧಿಕಾರಿಗಳು ಈ ಪ್ರಕರಣದಲ್ಲಿ ಮರು ವಿಚಾರಣೆ ಜರುಗಿಸಿ, ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ದಿನಾಂಕ:12-03-2008ರಂದು ಸಲ್ಲಿಸಿರುವ ವರದಿಯಲ್ಲಿ ಕೆಳಕಂಡಂತೆ ಅಭಿಪ್ರಾಯಪಟ್ಟಿರುತ್ತಾರೆ:-

> ". . . . ಎಲ್ಲಾ ಆರೋಪಿತರ ಮೇಲೆ ಹೊರೆಸಿರುವ ಆರೋಪವು ಸದರಿ ಆಡಿಟ್ ವರದಿಯಲ್ಲಿ ನ್ಯೂನತೆ ಇರುವ ಇನ್‌ವಾಯ್ಸ್‌ಗಳ ಮೇಲೆ ರಚಿತವಾಗಿರುತ್ತದೆ. ಎಲ್ಲಾ ಇನ್‌ವಾಯ್ಸ್‌ಗಳನ್ನು ನಿಶಾನೆಗಳಾಗಿ ಗುರುತಿಸಲಾಗಿದೆ ಮತ್ತು ಅವುಗಳನ್ನು ವಿವರವಾಗಿ ಪರಿಶೀಲಿಸಿ ಚರ್ಚಿಸಲಾಗಿದೆ. ಅಲ್ಲದೇ ಆಡಿಟ್ ವರದಿಯನ್ನು ತಯಾರು ಮಾಡಿರುವವರನ್ನು ಸಾಕ್ಷಿದಾರರಾಗಿ ವಿಚಾರಣೆ ಮಾಡಲಾಗಿದೆ. ಇದರ ಸಾಕ್ಷ್ಯವನ್ನೂ ಸಹ ವಿವರವಾಗಿ ಚರ್ಚಿಸಲಾಗಿದೆ. ಆದರೆ, ಈಗಾಗಲೇ ತೆಗೆದುಕೊಂಡಿರುವ ತೀರ್ಮಾನಕ್ಕೆ ವ್ಯತಿರಿಕ್ತವಾದ ತೀರ್ಮಾನ ತೆಗೆದುಕೊಳ್ಳಲು ಬಲವಾದ ಕಾರಣಗಳಿಲ್ಲದಿರುವುದರಿಂದ ಆರೋಪಿತರ ಮೇಲೆ ಹೊರೆಸಿರುವ ಯಾವ ಆರೋಪಗಳು ರುಜುವಾತುವಾಗಿಲ್ಲ" ಎಂದು ತೀರ್ಮಾನ ನೀಡಿರುತ್ತಾರೆ.

ಕೊಪ್ಪಳ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮತ್ತು ಉಪ ವಿಭಾಗಗಳಲ್ಲಿ ಉಗ್ರಾಣ ಕೊರತೆಯಿಂದ ಸರ್ಕಾರಕ್ಕೆ ರೂ.66,29,774/-ಗಳು ನಷ್ಟ ಉಂಟಾಗಿರುವುದು ಆಡಿಟ್ ವರದಿಯಿಂದ ಕಂಡುಬರುತ್ತದೆ. ಆದ್ದರಿಂದ ವಿಚಾರಣಾ ವರದಿಯನ್ನು ಒಪ್ಪದೇ ಈ ಪ್ರಕರಣವನ್ನು ಸಮಗ್ರವಾಗಿ ಪರಿಶೀಲಿಸಿ, ಯಾವ ಯಾವ ಅಧಿಕಾರಿ/ನೌಕರರು ಎಷ್ಟೆಷ್ಟು ಮೊತ್ತವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂಬುದನ್ನು ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಬಳ್ಳಾರಿ ಇವರಿಂದ ಪರಿಶೀಲಿಸಿ, ವರದಿ ಸಲ್ಲಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರನ್ನು ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ದಿನಾಂಕ:4/6.11.2008ರ ಪತ್ರದಲ್ಲಿ ತಿಳಿಸಲಾಗಿತ್ತು.

ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಬಳ್ಳಾರಿ ಇವರು ಕೊಪ್ಪಳ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮತ್ತು 4 ಉಪ ವಿಭಾಗಗಳಲ್ಲಿ ರೂ.36,73,699/-ಗಳಷ್ಟು ಉಗ್ರಾಣ ಸಾಮಗ್ರಿಗಳ ಕೊರತೆಯಿಂದ ಸರ್ಕಾರಕ್ಕೆ ನಷ್ಟ ಉಂಟಾಗಿರುವುದಾಗಿ ಮೇಲೆ ಕ್ರಮಾಂಕ (6)ರಲ್ಲಿ ಓದಲಾದ ದಿನಾಂಕ:7.1.2009ರ ಪತ್ರದಲ್ಲಿ ತಿಳಿಸಿರುತ್ತಾರೆ.

ಅಧೀಕ್ಷಕ ಇಂಜಿನಿಯರ್‌ರವರ ವರದಿಯಲ್ಲಿ 12 ಅಧಿಕಾರಿಗಳು ಪ್ರತ್ಯೇಕವಾಗಿ ದುರುಪಯೋಗಪಡಿಸಿಕೊಂಡಿರುವ ಮೊತ್ತ ರೂ.80,70,219/-ಗಳೆಂದು ಹಾಗೂ ಒಟ್ಟಾರೆ ರೂ.36,73,699/-ಗಳ ನಷ್ಟ ಉಂಟಾಗಿರುತ್ತದೆಂದು ತಿಳಿಸಿರುತ್ತಾರೆ. ಆದರೆ ಈ ಪ್ರಕರಣದ ಮೂಲ ಪ್ರಸ್ತಾವದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳರವರು ರೂ.66,29,774/-ಗಳ ನಷ್ಟ ಉಂಟಾಗಿರುವುದಾಗಿ ವರದಿ ಮಾಡಿದ್ದರಿಂದ, ಈ ಎಲ್ಲಾ ಅಂಕಿ-ಅಂಶಗಳನ್ನು ಸಮಗ್ರವಾಗಿ ಪರಿಶೀಲಿಸಿ ವಾಸ್ತವವಾಗಿ ಎಷ್ಟು ಮೊತ್ತದ ಸಾಮಗ್ರಿಗಳ ಕೊರತೆ ಉಂಟಾಗಿದೆ ಎಂಬುದರ ಬಗ್ಗೆ ಮಾಹಿತಿಯನ್ನು ನೀಡುವಂತೆ ದಿನಾಂಕ:8.9.2009ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರಿಗೆ ತಿಳಿಸಲಾಗಿತ್ತು.

ಶ್ರೀ ಎಂ.ಪಂಪಾಪತಿ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಇವರು ವಿಚಾರಣಾ ವರದಿಯಂತೆ ಮುಂದಿನ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಸೂಚಿಸುವಂತೆ ಕೋರಿ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ:3372/2011ನ್ನು ಪರಿಶೀಲಿಸಿ ನ್ಯಾಯಮಂಡಳಿಯು ದಿನಾಂಕ:22.06.2011ರಂದು ನೀಡಿರುವ ಆದೇಶದಲ್ಲಿ ವಿಚಾರಣಾ ವರದಿಯ ಬಗ್ಗೆ 3 ತಿಂಗಳೊಳಗಾಗಿ ಮುಂದಿನ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಿರುತ್ತದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರು ಸಲ್ಲಿಸಿರುವ ವರದಿಯಲ್ಲಿ ಶ್ರೀ ಎಂ. ಪಂಪಾಪತಿ ಇವರು ಸೇವೆಯಿಂದ ನಿವೃತ್ತಿ ಹೊಂದಿದ್ದು, ಸದರಿಯವರಿಂದ ಉಂಟಾದ ಉಗ್ರಾಣ ಕೊರತೆ ಬಾಬ್ತು ರೂ.2,13,725/-ಗಳನ್ನು ಪಾವತಿಸಿರುವುದಾಗಿ ಮೇಲೆ ಕ್ರಮ ಸಂಖ್ಯೆ(7)ರಲ್ಲಿ ಓದಲಾದ ದಿನಾಂಕ:23/31.1.2012ರ ಪತ್ರದಲ್ಲಿ ವರದಿ ಮಾಡಿರುತ್ತಾರೆ.

ಶ್ರೀ ಎಂ.ಪಂಪಾಪತಿ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕುಷ್ಟಗಿ ಇವರು ಪ್ರಸ್ತುತ ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಹಾಗೂ ಉಗ್ರಾಣ ಸಾಮಗ್ರಿಗಳ ಕೊರತೆಯಿಂದ ಉಂಟಾದ ನಷ್ಟದ ಹಣವನ್ನು ಪಾವತಿ ಮಾಡಿರುವುದರಿಂದ ಸದರಿಯವರ ವಿರುದ್ಧ ಮಾಡಿರುವ ಆರೋಪಗಳನ್ನು ಕೈಬಿಡಲು ಸರ್ಕಾರವು ನಿರ್ಣಯಿಸಿ, ಈ ಮುಂದಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 38 ಇಎನ್‌ಕ್ಯೂ 2004,**

**ಬೆಂಗಳೂರು ದಿನಾಂಕ: 07.03.2012**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಶ್ರೀ ಎಂ.ಪಂಪಾಪತಿ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕುಷ್ಟಗಿ ಇವರ ವಿರುದ್ಧ ಸರ್ಕಾರದ ನೋಟೀಸ್ ಸಂಖ್ಯೆ: ಗ್ರಾಅಪ 38 ಇಎನ್‌ಕ್ಯೂ 2004, ದಿನಾಂಕ:28.10.2005ರಲ್ಲಿ ಮಾಡಿರುವ ಆರೋಪಗಳಿಂದ ದೋಷಮುಕ್ತಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

7/3/2012

(ಎನ್.ವೈ.ಸಾಗರ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ / ಜಲಸಂಪನ್ಮೂಲ ಇಲಾಖೆ/ ಸಣ್ಣ ನೀರಾವರಿ ಇಲಾಖೆ.
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ರಿಸಾಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು,
4. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ., ರಾಜಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ.
7. ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಬಳ್ಳಾರಿ.
8. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ
9. ಸಂಬಂಧಪಟ್ಟ ಅಧಿಕಾರಿಗೆ.
10. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, (ಸೇವೆಗಳು-ಎ)/(ಸೇವೆಗಳು-ಸಿ)
11. ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾ.ಅ.ಪಂ.ರಾಜ್ ಇಲಾಖೆ (ಸೇವೆಗಳು-ಬಿ).
12. ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
13. ಗ್ರಾ.ಅ.ಪಂ.ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ/ ಉಪ ಕಾರ್ಯದರ್ಶಿ ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
14. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
15. ರಕ್ಷಾ ಕಡತ / ಮಾಹಿತಿ ಕೇಂದ್ರ/ ಹೆಚ್ಚುವರಿ ಪ್ರತಿಗಳು.